ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
ದಕ್ಷಿಣ ಕನ್ನಡ, ಮಂಗಳೂರು

ಸ್ಪೆಷಲ್ ಕೇಸ್ ನಂಬ್ರ 24/2015

ಆರೋಪಿಯ ಹೆಸರು	ರಫಪಾಲ್ ಜಿ.
ತಂದೆಯ ಹೆಸರು	ಗೋವಿಂದ ಭಟ್
ವಯಸ್ಸು	60 ವರ್ಷ
ಉದ್ಯೋಗ	ಕಿರಿಯ ಇಂಜಿನಿಯರ್
ವಾಸಸ್ಥಳ	ನೀಲಾಂಜನಾ, ಡೋರ್ ನಂ.3, ಡಬ್ಲ್ಯು29 360(1), ಮಲ್ಲಿಕಟ್ಟ ಸರಕಾರಿ ಶಾಲೆಯ ಎದುರು, ಕದ್ರಿ ದೇವಸ್ಥಾನ ರಸ್ತೆ, ಮಂಗಳೂರು.

ಭಾರತ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313ರ ಪ್ರಕಾರ ಆರೋಪಿಯ ಹೇಳಿಕೆ

ಪ್ರ.ನಂ.1 ಈ ಪ್ರಕರಣದಲ್ಲಿ ಅಭಿಯೋಜಕರ ಪರ ನ್ಯಾಯಾಲಯದಲ್ಲಿ ಮಾಡಿದ ಸಾಕ್ಷಿಗಳ ವಿಚಾರಣೆಯನ್ನು ಕೇಳಿದ್ದೀರಾ?

ಉತ್ತರಃ

ಪ್ರ.ನಂ.2 ಪ್ರಾಸಾ 1 ರಾಜೇಂದ್ರ ಶೆಟ್ಟಿ ಎಂ., ಪಂಚಾಯತ್ ಅಭಿವೃದ್ಧಿ ಅಧಿಕಾರಿ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 30.7.2012 ರಂದು ತನ್ನ ಮೇಲಾಧಿಕಾರಿಗಳ ನಿರ್ದೇಶನದ ಮೇರೆಗೆ ಚಾಸಾ 97 ಇವರ ಮುಂದೆ ಸಾಯಂಕಾಲ 5.30 ಗಂಟೆಗೆ ಮಂಗಳೂರು ಲೋಕಾಯುಕ್ತ ಕಚೇರಿಯಲ್ಲಿ ಹಾಜರು ಆಗಿದ್ದರು, ಅವರು ದಿನಾಂಕ 31.7.2012 ರಂದು ಬೆಳಿಗ್ಗೆ 6.00 ಗಂಟೆಗೆ ಕಚೇರಿಗೆ ಬರುವಂತೆ ತಿಳಿಸಿದ್ದರು ಮತ್ತು ಆ ಪ್ರಕಾರ ತಾನು ಬೆಳಿಗ್ಗೆ 6.15 ಗಂಟೆಗೆ ಮಂಗಳೂರು ಲೋಕಾಯುಕ್ತ ಕಚೇರಿಗೆ ಹೋಗಿದ್ದೆನು ಎಂದು ಹೇಳಿದ್ದಾರೆ. ಇದಕ್ಕೆ ನೀವೇನಾದರು ಹೇಳಲು ಬಯಸುತ್ತೀರಾ?

ಉತ್ತರಃ

ಪ್ರ.ನಂ.3 ಅದೇ ಸಾಕ್ಷಿ ಮುಂದುವರಿದು ದಿನಾಂಕ 31.7.2012 ರಂದು ಬೆಳಿಗ್ಗೆ 6.50 ಗಂಟೆಗೆ ಲೋಕಾಯುಕ್ತ ಪೊಲೀಸರೊಂದಿಗೆ ನೀಲಾಂಜನ ಎನ್ನುವವರ ಮನೆಗೆ ಹೋಗಿದ್ದರು, ಮತ್ತು ಲೋಕಾಯುಕ್ತ ಪೋಲೀಸರು ಆ ಮನೆಯ ಬಾಗಿಲನ್ನು ತೆಗೆಸಿ ಮನೆಯಲ್ಲಿದ್ದ ಎಲ್ಲಾ ವಸ್ತುಗಳನ್ನು ಪರಿಶೀಲನೆ ಮಾಡಿದ್ದಾರೆ, ಮನೆಯ ಹತ್ತಿರ ಇದ್ದ ಎರಡು ಕಾರುಗಳನ್ನು ಪರಿಶೀಲನೆ ಮಾಡಿದ್ದಾರೆ, ಶೋಧನೆ ಮಾಡುವ ಕಾಲಕ್ಕೆ ಕಂಡು ಬಂದಂತಹ 304 ವಸ್ತುಗಳನ್ನು ಆ ಮನೆಯಲ್ಲಿದ್ದವರ ವಶಕ್ಕೆ ನೀಡಿದ್ದಾರೆ ಎಂದು ಮತ್ತು ಆ ಸಮಯದಲ್ಲಿ ಪೊಲೀಸರು ನಿಪಿ 1 ರಂತೆ ಮಹಜರ್ ಮಾಡಿ ಒಟ್ಟು 50

ದಾಖಲೆಗಳನ್ನು ತಮ್ಮ ವಶಕ್ಕೆ ಪಡೆದಿದ್ದಾರೆಂದು ಮತ್ತು ಶೋಧನಾ ಪ್ರಕ್ರಿಯೆ ರಾತ್ರಿ 9 ಗಂಟೆಗೆ ಮುಗಿದಿದೆ ಎಂದು ಹೇಳಿದ್ದಾರೆ. ಇದಕ್ಕೆ ನೀವೇನಾದರು ಹೇಳಲು ಬಯಸುತ್ತೀರಾ?

ಉತ್ತರಃ

ಪ್ರ.ನಂ.4 ಪ್ರಾಸಾ 2 ಜಗದೀಶ್, ದ್ವಿ.ದ.ಸ. ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 30.7.2012 ರಂದು ತನ್ನ ಮೇಲಾಧಿಕಾರಿಗಳ ನಿರ್ದೇಶನದ ಮೇರೆಗೆ ದಿನಾಂಕ 31.7.2012 ರಂದು ಬೆಳಿಗ್ಗೆ 6.00 ಗಂಟೆಗೆ ಮಂಗಳೂರು ಲೋಕಾಯುಕ್ತ ಕಚೇರಿಗೆ ಹೋಗಿ ಚಾಸಾ 97 ಇವರನ್ನು ಭೇಟಿ ಆಗಿದ್ದೇನೆ ಎಂದು ಹೇಳಿದ್ದಾರೆ. ಇದಕ್ಕೆ ನೀವೇನಾದರು ಹೇಳಲು ಬಯಸುತ್ತೀರಾ?

ಉತ್ತರಃ

ಪ್ರ.ನಂ.5 ಅದೇ ಸಾಕ್ಷಿಯು ಮುಂದುವರಿದು ದಿನಾಂಕ 31.7.2012 ರಂದು ಬೆಳಿಗ್ಗೆ 11.00 ಗಂಟೆಗೆ ತಾನು, ಚಾಸಾ 3, 97 ಮತ್ತು ಪೊಲೀಸ್ ಸಿಬ್ಬಂದಿಯೊಂದಿಗೆ ಮಂಗಳೂರು ಮಹಾನಗರ ಪಾಲಿಕೆಯ ನಗರ ಯೋಜನಾ ವಿಭಾಗದ ಕಚೇರಿಗೆ ಹೋಗಿದ್ದೆವು; ಅಲ್ಲಿ ಮದನ್ ಮೋಹನ ಇದ್ದರು, ಆ ಕಚೇರಿಯಲ್ಲಿ ಇದ್ದಂತಹ ನಿನ್ನ ಟೇಬಲಿನ ಡ್ರಾವರ್ ಅನ್ನು ತಪಾಸಣೆ ಮಾಡಿದ್ದಾರೆ, ಅಲ್ಲಿ ಎರಡು ರಸೀದಿಗಳು ಸಿಕ್ಕಿವೆ ಮತ್ತು ಅವುಗಳನ್ನು ಪೊಲೀಸರು ನಿಶಾನೆ ಪಿ 2 ರಲ್ಲಿರುವ ಮಹಜರ್ ಮೂಲಕ ವಶ ಪಡಿಸಿಕೊಂಡಿದ್ದಾರೆ ಎಂದು ಹೇಳಿದ್ದಾರೆ. ಇದಕ್ಕೆ ನೀವೇನಾದರು ಹೇಳಲು ಬಯಸುತ್ತೀರಾ?

ಉತ್ತರಃ

ಪ್ರ.ನಂ.6 ಅದೇ ಸಾಕ್ಷಿಯು ಮುಂದುವರಿದು ಚಾಸಾ 97 ಇವರು ದಿನಾಂಕ 31.7.2012 ರಂದು ಕದ್ರಿ ಮಲ್ಲಿಕಟ್ಟೆಯಲ್ಲಿರುವ ಕೆನರಾ ಬ್ಯಾಂಕಿಗೆ ಕರೆದುಕೊಂಡು ಹೋಗಿದ್ದರು, ಅಲ್ಲಿದ್ದ ನಿನ್ನ ಹೆಸರಿನಲ್ಲಿರುವ ಲಾಕರನ್ನು ಬ್ಯಾಂಕಿನ ಅಧಿಕಾರಿಗಳ ಮೂಲಕ ತೆರೆಸಿದ್ದರು, ಆ ಲಾಕರ್ ನಲ್ಲಿ ಬಂಗಾರದ ಮತ್ತು ಬೆಳ್ಳಿಯ ಒಡವೆಗಳಿದ್ದವು, ಅವುಗಳನ್ನು ಅಕ್ಕಸಾಲಿಗ ಪರಿಶೀಲಿಸಿ ಮೌಲ್ಯಮಾಪನ ಮಾಡಿದ್ದಾನೆ; ಆ ಸಮಯದಲ್ಲಿ ಪೊಲೀಸರು ನಿಶಾನೆ ಪಿ 3 ರಂತೆ ಮಹಜರನ್ನು ಜರುಗಿಸಿ ತನ್ನ ಸಹಿಯನ್ನು ಪಡೆದಿದ್ದಾರೆ ಮತ್ತು ಈ ಕುರಿತು ತಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿದ್ದೇನೆ ಎಂದು ಹೇಳಿದ್ದಾರೆ. ಇದಕ್ಕೆ ನೀವೇನಾದರು ಹೇಳಲು ಬಯಸುತ್ತೀರಾ?

ಉತ್ತರಃ

ಪ್ರ.ನಂ.7 ಅದೇ ಸಾಕ್ಷಿಯು ಮುಂದುವರೆದು ಪೊಲೀಸರು ನಿನ್ನ ಕಚೇರಿಯ ಟೇಬಲ್ ಶೋಧನೆ ಮಾಡುವಾಗ ಹಾಗೂ ಕೆನರಾ ಬ್ಯಾಂಕಿನಲ್ಲಿರುವ ನಿನ್ನ ಲಾಕರನ್ನು ಶೋಧನೆ ಮಾಡುವಾಗ ನೀನು ಹಾಜರಿದ್ದಿ ಎಂದು ಹೇಳಿರುತ್ತಾರೆ. ಇದಕ್ಕೆ ನೀವೇನಾದರು ಹೇಳಲು ಬಯಸುತ್ತೀರಾ?

ಉತ್ತರಃ

ಪ್ರ.ನಂ.8 ಫ್ರಾಸಾ.3 ಎ. ಹರೀಶ್ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 31.7.2012 ರಂದು ತನಗೆ ಚಾಸಾ 97 ರವರು ಪೋನ್ ಮಾಡಿ ಕೆಲವು ಆಭರಣಗಳ ಮೌಲ್ಯಮಾಪನ ಮಾಡುವ ಕುರಿತಂತೆ ಮಲ್ಲಿಕಟ್ಟೆಯಲ್ಲಿನ ಕೆನರಾ ಬ್ಯಾಂಕಿಗೆ ಬರುವಂತೆ ತಿಳಿಸಿದ್ದರು; ಅದರಂತೆ ತಾನು ಅದೇ ದಿನದಂದು ಮಧ್ಯಾಹ್ನ 12.00 ಗಂಟೆಗೆ ಮಲ್ಲಿಕಟ್ಟೆಯಲ್ಲಿನ ಕೆನರಾ ಬ್ಯಾಂಕಿಗೆ ಹೋಗಿದ್ದರು; ಆ ವೇಳೆಗೆ ಅಲ್ಲಿ ಚಾಸಾ 97, ಇಬ್ಬರು ಪಂಚರು ಮತ್ತು ಬ್ಯಾಂಕ್ ಮ್ಯಾನೇಜರ್ ರವರು ಇದ್ದರು; ಅಲ್ಲಿ ತನಗೆ 9 ಚಿನ್ನದ ಆಭರಣಗಳು ಹಾಗೂ 7 ಬೆಳ್ಳಿಯ ವಸ್ತುಗಳನ್ನು ತೋರಿಸಿರುತ್ತಾರೆ; ತಾನು ಆ ವಸ್ತುಗಳನ್ನು ತೂಕ ಮಾಡಿ ನೋಡಿದಾಗ ಅಲ್ಲಿದ್ದ ಚಿನ್ನದ ಆಭರಣಗಳು ಒಟ್ಟಾಗಿ 223.130 ಗ್ರಾಂ ತೂಕ ಇರುವುದು ಹಾಗೂ ಬೆಳ್ಳಿಯ ವಸ್ತುಗಳು ಒಟ್ಟು 455.280 ಗ್ರಾಂ ತೂಕ ಇರುವುದು ಕಂಡು ಬಂದಿತ್ತು; ತಾನು ಅವುಗಳ ಮೌಲ್ಯಮಾಪನ ಮಾಡಿ ಚಿನ್ನದ ಆಭರಣಗಳ ಒಟ್ಟು ಮೌಲ್ಯ ರೂ.6,25,064.00 ಹಾಗೂ ಬೆಳ್ಳಿಯ ವಸ್ತುಗಳ ಒಟ್ಟು ಮೌಲ್ಯ ರೂ.26,000.00 ಎಂದು ತನ್ನ ಅಭಿಪ್ರಾಯವನ್ನು ಹೇಳಿರುತ್ತಾರೆ; ಬಳಿಕ ಸದ್ರಿ ಚಿನ್ನದ ಒಡವೆಗಳು ಮತ್ತು ಬೆಳ್ಳಿಯ ವಸ್ತುಗಳನ್ನು ಅಲ್ಲಿ ಹಾಜರಿದ್ದ ನಿನ್ನ ವಶಕ್ಕೆ ನೀಡಿದ್ದರು; ಆ ಸಮಯದಲ್ಲಿ ನಡೆಸಿದ ಪ್ರಕ್ರಿಯೆಗಳ ಕುರಿತು ಬ್ಯಾಂಕಿನಲ್ಲಿ ನಿಶಾನೆ 3 ರಂತೆ ದಾಖಲೆ ಮಾಡಿ ತನ್ನ ಸಹಿಯನ್ನು ಪೊಲೀಸರು ಪಡೆದಿದ್ದಾರೆಂದು ಹೇಳಿದ್ದಾರೆ. ಇದಕ್ಕೆ ನೀವೇನಾದರು ಹೇಳಲು ಬಯಸುತ್ತೀರಾ ?

ಉತ್ತರಃ

ಪ್ರ.ನಂ.9 ಅದೇ ಸಾಕ್ಷಿಯು ಮುಂದುವರೆದು ತನ್ನ ಸಾಕ್ಷಿಯಲ್ಲಿ ಚಾಸಾ 97 ರವರು ತನಗೆ ಅದೇ ದಿನದಂದು ರಾತ್ರಿ 7.30 ರ ವೇಳೆಗೆ ಕದ್ರಿಯ ಸರಕಾರಿ ಶಾಲೆಯ ಬಳಿ ಬರುವಂತೆ ತಿಳಿಸಿದ್ದರು; ಅದರಂತೆ ತಾನು ಸದ್ರಿ ದಿನದಂದು ರಾತ್ರಿ 7.45 ರಿಂದ 8.00 ಯ ಒಳಗಾಗಿ ನೇರವಾಗಿ ನಿನ್ನ ಮನೆಗೆ ಹೋಗಿದ್ದರು; ಆ ವೇಳೆಗೆ ಅಲ್ಲಿ ಲೋಕಾಯುಕ್ತ ಪೊಲೀಸರು ಪರಿಶೀಲನೆಯನ್ನು ನಡೆಸುತ್ತಿದ್ದರು; ಆಗ ತನಗೆ ನಿನ್ನ ಹೆಂಡತಿಯ ಮೈ ಮೇಲೆ ಇದ್ದ 3 ಚಿನ್ನದ ಒಡವೆಗಳನ್ನು ನೀಡಿ ಅದರ ಮೌಲ್ಯಮಾಪನ ಮಾಡುವಂತೆ ತಿಳಿಸಿದ್ದರು; ತಾನು ಅವುಗಳನ್ನು ತೂಕ ಮಾಡಿ ನೋಡಿದಾಗ ಅವುಗಳು ಒಟ್ಟಾಗಿ 22.500 ಗ್ರಾಂ ತೂಕ ಇರುವುದು ಕಂಡು ಬಂದಿತ್ತು; ಸದ್ರಿ ಒಡವೆಗಳು ಒಟ್ಟಾಗಿ ರೂ.62,000.00 ಬೆಲೆ ಬಾಳುವುದಾಗಿ ತಾನು ತನ್ನ ಅಭಿಪ್ರಾಯ ತಿಳಿಸಿದ್ದಾರ; ಆ ಸಮಯದಲ್ಲಿ ಪೊಲೀಸರು ಅಲ್ಲಿ ಮಾಡಲಾದ ದಾಖಲೆಯಲ್ಲಿ ತನ್ನ ಸಹಿಯನ್ನು ನಿಶಾನೆ ಪಿ 1 ರ ಮೇಲೆ ಪಡೆದಿದ್ದಾರೆಂದು ಹೇಳಿದ್ದಾರೆ. ಇದಕ್ಕೆ ನೀವೇನಾದರು ಹೇಳಲು ಬಯಸುತ್ತೀರಾ ?

ಉತ್ತರಃ

ಪ್ರ.ನಂ.10 ಪ್ರಾಸಾ.4 ಉದಯ್ ಎಂ. ನಾಯಕ್, ನಿವೃತ್ತ ಎಸ್.ಪಿ. ಇವರು ತಮ್ಮ ಸಾಕ್ಷ್ಯದಲ್ಲಿ, ತಾನು ನಿನ್ನ ಸೇವಾ ಅವಧಿಯಲ್ಲಿ ಬಲ್ಲ ಆದಾಯಕ್ಕಿಂತ ಹೆಚ್ಚಿನ ಆಸ್ತಿ ಮತ್ತು ಖರ್ಚುಗಳನ್ನು ಹೊಂದಿರುವ ಬಗ್ಗೆ ದಿನಾಂಕಃ 27.7.2012 ರಂದು ಮಂಗಳೂರು ಲೋಕಾಯುಕ್ತ ಪೊಲೀಸ್ ಅಧೀಕ್ಷಕರಿಗೆ ಒಂದು ಸೋರ್ಸ್ ವರದಿಯನ್ನು ನಿಪಿ 71 ರಂತೆ ಸಲ್ಲಿಸಿರುತ್ತಾರೆ; ಬಳಿಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕರು ತಾನು ಸಲ್ಲಿಸಿದ್ದ ಸೋರ್ಸ್ ವರದಿಯನ್ನು ಪರಿಶೀಲಿಸಿ ಆ ಬಗ್ಗೆ ತನಿಖೆ ನಡೆಸುವ ಅವಶ್ಯಕತೆಯ ಕುರಿತು ಮನವರಿಕೆಯಾಗಿ ಆ ಬಗ್ಗೆ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ನಡೆಸುವಂತೆ ಚಾಸಾ 97 ರವರಿಗೆ ಆದೇಶಿಸಿರುತ್ತಾರೆ; ಅದರಂತೆ ಚಾಸಾ 97 ರವರು ಪ್ರಕರಣವನ್ನು ದಾಖಲಿಸಿಕೊಂಡ ಬಳಿಕ ನಿಮ್ಮ ಮನೆ ಮತ್ತು ಕಚೇರಿಯನ್ನು ಶೋಧನೆ ನಡೆಸುವ ಬಗ್ಗೆ ನ್ಯಾಯಾಲಯದಿಂದ ಸರ್ಚ್ ವಾರಂಟನ್ನು ಪಡೆದಿರುತ್ತಾರೆ; ಬಳಿಕ ಚಾಸಾ 97 ರವರು ನಿಮ್ಮ ಮನೆಯನ್ನು ಶೋಧನೆ ಮಾಡುವ ಬಗ್ಗೆ ತನಗೆ ಒಂದು ಸರ್ಚ್ ವಾರಂಟನ್ನು ನೀಡಿರುತ್ತಾರೆ; ಅಲ್ಲದೆ ಸದ್ರಿ ಶೋಧನಾ ಕಾರ್ಯದಲ್ಲಿ ಸಹಕರಿಸಲು ಚಾಸಾ 7 ಮತ್ತು ಚಾಸಾ 8 ರವರನ್ನು ನೇಮಿಸಿರುತ್ತಾರೆ.

ಉತ್ತರಃ

ಪ್ರ.ನಂ.11 ಅದೇ ಸಾಕ್ಷಿ ಮುಂದುವರಿದು ದಿನಾಂಕಃ 31.7.2012 ರಂದು ತಾನು ಬೆಳಿಗ್ಗೆ 6.00 ಗಂಟೆಗೆ ಚಾಸಾ 7, ಚಾಸಾ 8 ಮತ್ತು ಇತರ ಸಿಬ್ಬಂದಿಗಳೊಂದಿಗೆ ಮಂಗಳೂರು ಲೋಕಾಯುಕ್ತ ಕಚೇರಿಯಿಂದ ಹೊರಟು ಬೆಳಿಗ್ಗೆ 6.15 ರ ವೇಳೆಗೆ ಮಂಗಳೂರು ಮಲ್ಲಿಕಟ್ಟೆಯಲ್ಲಿನ ಸರಕಾರಿ ಶಾಲೆಯ ಎದುರುಭಾಗದಲ್ಲಿ ಇದ್ದ ನೀಲಾಂಜನ ಎನ್ನುವ ಹೆಸರಿನ ನಿಮ್ಮ ಮನೆಗೆ ಹೋಗಿರುತ್ತಾರೆ; ತಾವು ಸದ್ರಿ ಮನೆಯ ಬಳಿಗೆ ಹೋಗಿ ಕರೆಗಂಟೆಯನ್ನು ಬಾರಿಸಿದಾಗ ನೀನು ಬಂದು ಮನೆಯ ಬಾಗಿಲನ್ನು ತೆಗೆದಿದ್ದು, ನಿಮಗೆ ತಮ್ಮ ಗುರುತು ಪರಿಚಯ ಹೇಳಿಕೊಂಡು ನಿಮ್ಮ ವಿರುದ್ದ ದಾಖಲಾಗಿರುವ ಪ್ರಕರಣದ ಬಗ್ಗೆ ಮಾಹಿತಿಯನ್ನು ನೀಡಿ ಅವರ ಮನೆಯನ್ನು ಶೋಧನೆ ಮಾಡಲು ನ್ಯಾಯಾಲಯದಿಂದ ಪಡೆದಿರುವ ಸರ್ಚ್ ವಾರಂಟ್ ಬಗ್ಗೆ ಮಾಹಿತಿಯನ್ನು ನೀಡಿರುತ್ತಾರೆ; ಅಲ್ಲದೆ ಸಂಬಂಧಿತ ಸರ್ಚ್ ವಾರಂಟ್‌ನಲ್ಲಿ ನಿನ್ನ ಸಹಿಯನ್ನು ಪಡೆದಿರುತ್ತಾರೆ; ನಂತರ ನಿನ್ನನ್ನು ನಿಮ್ಮ ಮನೆಯಲ್ಲಿ ಇರುವ ಇತರ ವ್ಯಕ್ತಿಗಳ ಬಗ್ಗೆ ವಿಚಾರಿಸಿದಾಗ ನಿಮ್ಮ ಮನೆಯಲ್ಲಿ ನಿನ್ನ ಹೆಂಡತಿ ಶಕುಂತಳ ಮತ್ತು ಮಗ ಪರೀಕ್ಷಿತ್ ಇರುವುದಾಗಿ ತಿಳಿಸಿದ್ದು; ಅದರಂತೆ ತಾನು ಸದ್ರಿ ವ್ಯಕ್ತಿಗಳಿಗೆ ಸರ್ಚ್ ವಾರಂಟ್ ಬಗ್ಗೆ ತಿಳಿಸಿ ಅದರಲ್ಲಿ ಅವರ ಸಹಿಗಳನ್ನು ಪಡೆದಿರುತ್ತೇನೆ ಎಂದು ಹೇಳಿದ್ದಾರೆ. ಇದಕ್ಕೆ ನೀವೇನಾದರು ಹೇಳಲು ಬಯಸುತ್ತೀರಾ?

ಉತ್ತರಃ

ಪ್ರ.ನಂ.12

ಅದೇ ಸಾಕ್ಷಿಯು ಮುಂದುವರೆದು ನೀನು ಮನೆಯ ಶೋಧನಾ ಕಾರ್ಯಕ್ಕೆ ಸಹಕರಿಸಲು ಒಪ್ಪಿಕೊಂಡ ಮೇರೆಗೆ ತಾವೆಲ್ಲರೂ ಸದ್ರಿ ಮನೆಯನ್ನು ಪ್ರವೇಶಿಸಿ ಸದ್ರಿ ಮನೆಯನ್ನು ಕೂಲಂಕುಷವಾಗಿ ಶೋಧನೆ ಮಾಡಿರುತ್ತಾರೆ; ಆ ವೇಳೆಗೆ ನಿಮ್ಮ ಮನೆಯಲ್ಲಿ 50 ದಾಖಲೆಗಳು ದೊರಕಿರುತ್ತವೆ, ಅವುಗಳನ್ನು ತಾನು ತನಿಖೆಯ ಸಲುವಾಗಿ ಅಮಾನತ್ತುಪಡಿಸಿಕೊಂಡಿದ್ದೇನೆ ಎಂದು ಹೇಳಿದ್ದಾರೆ. ಇದಕ್ಕೆ ನೀವೇನಾದರು ಹೇಳಲು ಬಯಸುತ್ತೀರಾ?

ಉತ್ತರಃ

ಪ್ರ.ನಂ.13

ಅದೇ ಸಾಕ್ಷಿಯು ಮುಂದುವರೆದು ಸದ್ರಿ ಮನೆಯ ಶೋಧನಾ ಕಾರ್ಯದ ವೇಳೆಯಲ್ಲಿ ನಿಮ್ಮ ಮನೆಯಲ್ಲಿ ಚಿನ್ನಾಭರಣಗಳು ದೊರಕಿದ್ದವು; ತಾನು ಚಾಸಾ 5 ರವರನ್ನು ಸ್ಥಳಕ್ಕೆ ಕರೆಸಿ ಅವರ ಮೂಲಕ ಸದ್ರಿ ಚಿನ್ನಾಭರಣಗಳ ಮೌಲ್ಯಮಾಪನವನ್ನು ಮಾಡಿಸಿ ಬಳಿಕ ಅವುಗಳನ್ನು ನಿನ್ನ ವಶಕ್ಕೆ ನೀಡಿರುತ್ತಾರೆ; ಶೋಧನಾ ಕಾರ್ಯದ ವೇಳೆಗೆ ಕಂಡು ಬಂದ ಮೊಬೈಲ್ ಗಳು, ಕಾರು, ಗೃಹ ಉಪಯೋಗಿ ವಸ್ತುಗಳ ಬಗ್ಗೆ ದಾಖಲೆಯನ್ನು ತಯಾರಿಸಿ ಸದ್ರಿ ವಸ್ತುಗಳನ್ನು ನಿನ್ನ ವಶಕ್ಕೆ ನೀಡಿರುತ್ತಾರೆ; ಆ ಸಮಯದಲ್ಲಿ ತಾನು ನಿಶಾನೆ ಪಿ 1 ರ ಪ್ರಕಾರ ಮಹಜರ್ ಜರುಗಿಸಿದ್ದೇನೆ, ಅದರಲ್ಲಿ ನಿನ್ನ, ನಿನ್ನ ಹೆಂಡತಿ ಮಗನ ಸಹಿಗಳನ್ನು ಪಡೆದು ಆ ಮಹಜರಿನ ಒಂದು ಪ್ರತಿಯನ್ನು ನಿನಗೆ ನೀಡಿದ್ದೇನೆಂದು ಹೇಳಿದ್ದಾರೆ. ಇದಕ್ಕೆ ನೀವೇನಾದರು ಹೇಳಲು ಬಯಸುತ್ತೀರಾ?

ಉತ್ತರಃ

ಪ್ರ.ನಂ.14

ಅದೇ ಸಾಕ್ಷಿ ಮುಂದುವರೆದು, ಅದೇ ದಿನ ಶೋಧನೆ ಮಾಡಿದ ಕುರಿತು ವರದಿಯನ್ನು ತಯಾರಿಸಿ ವರದಿಯೊಂದಿಗೆ ಶೋಧನ ವಾರಂಟ್, ಮಹಜರ್, ಅಮಾನತ್ತು ಪಡಿಸಿಕೊಂಡ ದಾಖಲೆಗಳನ್ನು ಚಾಸಾ 97 ಇವರಿಗೆ ನೀಡಿದ್ದೇನೆ ಮತ್ತು ಆ ಕುರಿತು ತನ್ನ ಹೇಳಿಕೆಯನ್ನು ನೀಡಿದ್ದೇನೆ ಎಂದು ಹೇಳಿರುತ್ತಾರೆ. ಇದಕ್ಕೆ ನೀವೇನಾದರು ಹೇಳಲು ಬಯಸುತ್ತೀರಾ?

ಉತ್ತರಃ

ಪ್ರ.ನಂ.15 ಪ್ರಾಸಾ 5 ಸದಾನಂದ ಅಂಚನ್, ಆರ್ಕಿಟೆಕ್ಟ್ ಇವರು ತಮ್ಮ ಸಾಕ್ಷ್ಯದಲ್ಲಿ ತಾನು 1975 ರಿಂದ ಮಂಗಳೂರಿನ ಕಂಕನಾಡಿಯಲ್ಲಿರುವ ಇಂಪಾಲ ಬಿಲ್ಡಿಂಗ್‌ನಲ್ಲಿ ಡೆಸ್ಕಾಂ ಆರ್ಕಿಟೆಕ್ಟ್ ಅಂಡ್ ಇಂಜಿನಿಯರ್ಸ್ ಎಂಬ ಹೆಸರಿನಲ್ಲಿ ಕನ್ಸಲ್ಟಿಂಗ್ ವ್ಯವಹಾರವನ್ನು ನಡೆಸುತ್ತಿದ್ದಾರೆ; ನೀನು ಆತನ ಬಳಿ 1982 ರಿಂದ ಎರಡು ವರ್ಷಗಳ ಕಾಲ ಸೂಪರ್ ವೈಸರ್ ಆಗಿ ಕೆಲಸ ಮಾಡಿರುತ್ತಿ; ನಿನಗೆ ತಿಂಗಳಿಗೆ ರೂ.1,100 ರಂತೆ ಸಂಬಳ ಕೊಡುತ್ತಿದ್ದರು; ನೀನು ಕೆಲಸವನ್ನು ಬಿಟ್ಟಾಗ ನಿನಗೆ

ತಿಂಗಳಿಗೆ ರೂ.1,800 ರಂತೆ ಸಂಬಳವನ್ನು ಕೊಡುತ್ತಿದ್ದರು; ಈ ಬಗ್ಗೆ ತಾನು ಈ ಪ್ರಕರಣದ ತನಿಖಾಧಿಕಾರಿಯರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದು ಹೇಳಿದ್ದಾರೆ. ಇದಕ್ಕೆ ನೀವೇನಾದರು ಹೇಳಲು ಬಯಸುತ್ತೀರಾ?

ಉತ್ತರಃ

ಪ್ರ.ನಂ.16 ಪ್ರಾಸಾ 6 ಭಾಸ್ಕರ್, ಕಾವೂರು, ನಿವೃತ್ತ ಸಿವಿಲ್ ಇಂಜಿನಿಯರ್ ಇವರು ತಮ್ಮ ಸಾಕ್ಷ್ಯದಲ್ಲಿ 1995 ರಲ್ಲಿ ತಾನು ಮತ್ತು ತನ್ನ ಭಾವ ರಾಮಕೃಷ್ಣರವರು ಸೇರಿಕೊಂಡು ಮಂಗಳೂರು ನಗರದ ಕೂಳೂರು ಪೆರಿ ರಸ್ತೆಯಲ್ಲಿ ಇದ್ದ ಸ್ಥಳದಲ್ಲಿ 6 ಪ್ಲಾಟುಗಳನ್ನು ಕಟ್ಟಿಸಿದ್ದರು; ಅದರಲ್ಲಿ ತಾವು ಒಂದು ಪ್ಲಾಟನ್ನು ನಿನ್ನ ಹೆಂಡತಿಗೆ ರೂ.3,00,000 ಕ್ಕೆ ಮಾರಾಟ ಮಾಡಿರುತ್ತಾರೆ; ಬಳಿಕ 2003 ರಲ್ಲಿ ತಾನು ನಿನ್ನಿಂದ ಸದ್ರಿ ಪ್ಲಾಟನ್ನು ರೂ.3,32,000 ಮೊತ್ತಕ್ಕೆ ಮರು ಖರೀದಿಸಿರುತ್ತಾರೆ; ಈ ಬಗ್ಗೆ ತಾನು ಈ ಪ್ರಕರಣದ ತನಿಖಾಧಿಕಾರಿಯವರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದು ಹೇಳಿದ್ದಾರೆ. ಇದಕ್ಕೆ ನೀವೇನಾದರು ಹೇಳಲು ಬಯಸುತ್ತೀರಾ?

ಉತ್ತರಃ

ಪ್ರ.ನಂ.17 ಪ್ರಾಸಾ 7 ಹೆಚ್.ಪಿ. ಸುಬ್ರಮಣ್ಯ ಇವರು ತನ್ನ ಸಾಕ್ಷಿಯಲ್ಲಿ ತಾನು ಕಳೆದ ಸುಮಾರು 25 ವರ್ಷಗಳಿಂದ ಮಂಗಳೂರಿನ ಕರಂಗಲಪಾಡಿಯಲ್ಲಿ ವಿಕ್ರಮ್ ಇಂಟರ್ ನ್ಯಾಶನಲ್ ಟ್ರಾವೆಲ್ಸ್ ಹೆಸರಿನಲ್ಲಿ ವ್ಯವಹಾರ ನಡೆಸುತ್ತಿದ್ದಾರೆ; 2012 ರಲ್ಲಿ ಮಂಗಳೂರು ಲೋಕಾಯುಕ್ತ ಪೊಲೀಸರು ತನ್ನ ಸಂಸ್ಥೆಗೆ ಬಂದು ನೀನು ತನ್ನ ಸಂಸ್ಥೆಯನ್ನು ಬಳಸಿಕೊಂಡು ಪ್ರವಾಸ ಕೈಗೊಂಡ ಬಗ್ಗೆ ಮಾಹಿತಿಯನ್ನು ಕೇಳಿದ್ದರು; ಅದರಂತೆ ತಾನು ತನ್ನ ದಾಖಲೆಯನ್ನು ಪರಿಶೀಲಿಸಿ ನೀನು ಹಾಗೂ ನಿನ್ನ ಮಗನಾದ ಪರಿಕ್ಷೀತ್‌ರವರು ಕ್ರೆಡಿಟ್ ಇನ್‌ವಾಯ್ಸ್ ಬಿಲ್ಲು ಮೂಲಕ ಮಂಗಳೂರಿನಿಂದ ದೆಹಲಿಗೆ ಕಿಂಗ್ ಫಿಶರ್ ಏರ್ ಲೈನ್ಸ್ ನಲ್ಲಿ ಪ್ರಯಾಣಿಸಲು ಟಿಕೇಟ್ ಬುಕ್ಕಿಂಗ್ ಮಾಡಿದ್ದ ಬಗ್ಗೆ ಹಾಗೂ ಕ್ರೆಡಿಟ್ ಇನ್‌ವಾಯ್ಸ್ ಬಿಲ್ಲು ಮೂಲಕ ಅವರುಗಳು ಕಿಂಗ್ ಫಿಶರ್ ಏರ್ ಲೈನ್ಸ್ ನಲ್ಲಿ ದೆಹಲಿಯಿಂದ ಮಂಗಳೂರಿಗೆ ವಾಪಾಸು ಬರಲು ಟಿಕೇಟುಗಳನ್ನು ಬುಕ್ಕಿಂಗ್ ಮಾಡಿದ್ದ ಬಗ್ಗೆ ಮಾಹಿತಿಯನ್ನು ನೀಡಿರುತ್ತಾರೆ; ಮತ್ತು ತನಿಖಾಧಿಕಾರಿಗಳ ಮುಂದೆ ಹೇಳಿಕೆಯನ್ನು ನೀಡಿದ್ದೇನೆ ಎಂದು ಹೇಳಿರುತ್ತಾರೆ. ಇದಕ್ಕೆ ನೀವೇನಾದರು ಹೇಳಲು ಬಯಸುತ್ತೀರಾ?

ಉತ್ತರಃ

ಪ್ರ.ನಂ.18 ಪ್ರಾಸಾ 8 ಶ್ರೀಕಾಂತ್ ರಾವ್, ಆಯುಕ್ತರು, ಮೂಡಾ ಮಂಗಳೂರು, ಇವರು ತನ್ನ ಸಾಕ್ಷಿಯಲ್ಲಿ ತಾನು ದಿನಾಂಕಃ 16.11.2011 ರಿಂದ 22.8.2013 ರವರೆಗೆ

ಮಂಗಳೂರು ಮಹಾ ನಗರ ಪಾಲಿಕೆಯಲ್ಲಿ ಜಂಟಿ ಆಯುಕ್ತರಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತಾರೆ; 2012 ರಲ್ಲಿ ಮಂಗಳೂರು ಲೋಕಾಯುಕ್ತ ಪೊಲೀಸರು ನಿನ್ನ ವೇತನ ವಿವರಗಳನ್ನು ಒದಗಿಸುವಂತೆ ಕೇಳಿದ್ದರು; ಅದರಂತೆ ತಾನು ಲೋಕಾಯುಕ್ತ ಪೊಲೀಸರಿಗೆ ವೇತನ ವಿವರಗಳನ್ನು ಒಳಗೊಂಡ ಮಾಹಿತಿಯನ್ನು ಒದಗಿಸಿರುತ್ತಾರೆ ಎಂದು ಹೇಳಿದ್ದಾರೆ. ಇದಕ್ಕೆ ನೀವೇನಾದರು ಹೇಳಲು ಬಯಸುತ್ತೀರಾ ?

ಉತ್ತರಃ

ಪ್ರ.ನಂ.19 ಅದೇ ಸಾಕ್ಷಿಯು ಮುಂದುವರೆದು, ಲೋಕಾಯುಕ್ತ ಪೊಲೀಸರು ನಿನಗೆ ನೀಡಲಾದ ಬಹುಮಾನದ ಮಾಹಿತಿಯನ್ನು ಒದಗಿಸುವಂತೆ ಕೋರಿದ್ದ ಮೇರೆಗೆ ತಾನು ಪತ್ರ ಬರೆದು ಸಂಬಂಧಿತ ಮಾಹಿತಿಯನ್ನು ನೀಡಿರುತ್ತಾರೆ ಮತ್ತು ಆ ಕುರಿತು ತಾನು ತನಿಖಾಧಿಕಾರಿಯವರ ಮುಂದೆ ಹೇಳಿಕೆಯನ್ನು ನೀಡಿದ್ದೇನೆ ಎಂದು ಹೇಳಿದ್ದಾರೆ. ಇದಕ್ಕೆ ನೀವೇನಾದರು ಹೇಳಲು ಬಯಸುತ್ತೀರಾ ?

ಉತ್ತರಃ

ಪ್ರ.ನಂ.20 ಪ್ರಾಸಾ 9 ಜಿ.ಎಸ್. ಹೆಗಡೆ, ಸಹಾಯಕ ವಾಹನ ಸಾರಿಗೆ ಅಧಿಕಾರಿ ಇವರು ತನ್ನ ಸಾಕ್ಷಿಯಲ್ಲಿ, 2012 ರಲ್ಲಿ ಮಂಗಳೂರು ಲೋಕಾಯುಕ್ತ ಪೊಲೀಸರು ಕೆಎ 19 ಎಂಸಿ 3473 ಸಂಖ್ಯೆಯ ವಾಹನದ ನಿರ್ವಹಣಾ ವೆಚ್ಚ ಮತ್ತು ಇಂಧನ ವೆಚ್ಚದ ಬಗ್ಗೆ ವಿವರವನ್ನು ಕೇಳಿದ್ದರು; ಅದರಂತೆ ತಾನು ಸಂಬಂಧಿತ ವಾಹನವನ್ನು ಪರಿಶೀಲಿಸಿ ಲೋಕಾಯುಕ್ತ ಪೊಲೀಸರಿಗೆ ಮಾಹಿತಿಯನ್ನು ಒದಗಿಸಿರುತ್ತಾರೆ ಮತ್ತು ತನಿಖಾಧಿಕಾರಿಯವರ ಮುಂದೆ ಹೇಳಿಕೆ ಕೊಟ್ಟಿರುತ್ತಾರೆ ಎಂದು ಹೇಳಿದ್ದಾರೆ. ಇದಕ್ಕೆ ನೀವೇನಾದರು ಹೇಳಲು ಬಯಸುತ್ತೀರಾ ?

ಉತ್ತರಃ

ಪ್ರ.ನಂ.21 ಪ್ರಾಸಾ 10 ಕುಳ್ಳೆಗೌಡ, ನಿವೃತ್ತ ತಹಶೀಲ್ದಾರ್ ಇವರು ತಮ್ಮ ಸಾಕ್ಷ್ಯದಲ್ಲಿ ಮಂಗಳೂರು ಲೋಕಾಯುಕ್ತ ಪೊಲೀಸರು ಈ ಪ್ರಕರಣದ ತನಿಖೆ ಕಾಲದಲ್ಲಿ ಗೋವಿಂದ ಭಟ್, ತಂದೆಃ ಕೃಷ್ಣ ಭಟ್, ನಿಡ್ಪಳಿ ಗ್ರಾಮ ಇವರು ಹೊಂದಿರುವ ಜಮೀನಿನ ವಿವರಗಳನ್ನು ಒದಗಿಸುವಂತೆ ಕೋರಿದ್ದರು; ಅದರಂತೆ ತಾನು ಸದ್ರಿ ವಿಚಾರವಾಗಿ ತಾನು ಸ್ಥಳೀಯ ಅಧಿಕಾರಿಗಳಿಂದ ಆ ಬಗ್ಗೆ ಮಾಹಿತಿಯನ್ನು ಪಡೆದು ಲೋಕಾಯುಕ್ತ ಪೊಲೀಸರಿಗೆ ದಿನಾಂಕಃ 14.6.2013 ರಂದು ಒಂದು ಪತ್ರವನ್ನು ಬರೆದು ಮಾಹಿತಿಯನ್ನು ಒದಗಿಸಿರುತ್ತಾರೆ ಮತ್ತು ತನಿಖಾಧಿಕಾರಿಯು ತನ್ನ ಹೇಳಿಕೆಯನ್ನು ಪಡೆದಿದ್ದಾರೆ ಎಂದು ಹೇಳಿದ್ದಾರೆ. ಇದಕ್ಕೆ ನೀವೇನಾದರು ಹೇಳಲು ಬಯಸುತ್ತೀರಾ ?

ಉತ್ತರಃ

ಪ್ರ.ನಂ.22 ಪ್ರಾಸಾ 11 ಶ್ರೀಮತಿ ರೇಖಾ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ತಮ್ಮ ಸಾಕ್ಷ್ಯದಲ್ಲಿ, 2013 ರಲ್ಲಿ ಮಂಗಳೂರು ಲೋಕಾಯುಕ್ತ ಪೊಲೀಸರು ಗೋವಿಂದ ಭಟ್, ತಂದೆಃ ಕೃಷ್ಣ ಭಟ್, ನಿಡ್ಪಳಿ ಗ್ರಾಮ ಇವರು ಹೊಂದಿರುವ ಕೃಷಿ ಭೂಮಿಯ ವಾರ್ಷಿಕ ಆದಾಯದ ಬಗ್ಗೆ ವಿವರ ಒದಗಿಸುವಂತೆ ಕೋರಿದ್ದರು; ಅದರಂತೆ ತಾನು ಗೋವಿಂದ ಭಟ್‌ರವರು ನಿಡ್ಪಳಿ ಗ್ರಾಮದಲ್ಲಿ ಹೊಂದಿರುವ ಕೃಷಿ ಜಮೀನುಗಳಿಗೆ ಹೋಗಿ ಅವುಗಳನ್ನು ಪರಿಶೀಲಿಸಿ ಗೋವಿಂದ ಭಟ್ ಇವರು 1984 ರಿಂದ 2012 ರ ಅವಧಿಯಲ್ಲಿ ಗಳಿಸಿರಬಹುದಾದ ಆದಾಯದ ಬಗ್ಗೆ ಅಂದಾಜು ಮಾಹಿತಿಯನ್ನು ನೀಡಿರುತ್ತಾರೆ; ಈ ಬಗ್ಗೆ ತಾನು ದಿನಾಂಕಃ 28.12.2013 ರಂದು ಲೋಕಾಯುಕ್ತ ಪೊಲೀಸರಿಗೆ ಒಂದು ಪತ್ರವನ್ನು ಬರೆದು ಅದರೊಂದಿಗೆ ಗೋವಿಂದ ಭಟ್‌ರವರ ಕೃಷಿ ಆದಾಯದ ಬಗ್ಗೆ ವಿವರವನ್ನು ಒದಗಿಸಿರುತ್ತಾರೆ ಮತ್ತು ತನಿಖಾಧಿಕಾರಿಯವರ ಮುಂದೆ ಹೇಳಿಕೆಯನ್ನು ನೀಡಿರುತ್ತಾರೆ ಎಂದು ಹೇಳಿದ್ದಾರೆ. ಇದಕ್ಕೆ ನೀವೇನಾದರೂ ಹೇಳಲು ಬಯಸುತ್ತೀರಾ?

ಉತ್ತರಃ

ಪ್ರ.ನಂ.23 ಪ್ರಾಸಾ 12 ಕೆ ಎಸ್ ಪ್ರಭಾಕರ್, ನಿವೃತ್ತ ಕಾರ್ಯಪಾಲಕ ಇಂಜಿನಿಯರ್, ಇವರು ತಮ್ಮ ಸಾಕ್ಷ್ಯದಲ್ಲಿ, 2012 ರಲ್ಲಿ ಲೋಕಾಯುಕ್ತ ಪೊಲೀಸರಿಂದ ತಮ್ಮ ಕಚೇರಿಗೆ ಕದ್ರಿ ಗ್ರಾಮದ ಮಲ್ಲಿಕಟ್ಟೆಯಲ್ಲಿ ಇರುವ ರಫಪಾಲ್ ಜಿ ರವರಿಗೆ ಸೇರಿದ ಮನೆ ಹಾಗೂ ಅಂಗಡಿ ಕಟ್ಟಡಗಳ ಮೌಲ್ಯ ಮಾಪನ ಹಾಗೂ ನಕಾಶೆಯನ್ನು ತಯಾರಿಸಿ ಕೊಡುವಂತೆ ಪತ್ರ ಬಂದಿತ್ತು; ಅದರಂತೆ ತಾನು ಮತ್ತು ರಾಜೇಶ್ ರೈ ಎನ್ನುವ ಸೆಕ್ಷನ್ ಆಫೀಸರ್ ರವರು ಸಂಬಂಧಿತ ಸ್ವತ್ತಿಗೆ ಹೋಗಿ ಅದರಲ್ಲಿನ ಕಟ್ಟಡಗಳ ಮೌಲ್ಯಮಾಪನವನ್ನು ಮಾಡಿ ಅದರ ನಕಾಶೆಯನ್ನು ತಯಾರಿಸಿರುತ್ತಾರೆ; ಬಳಿಕ ತಾವು ಒಂದು ವರದಿಯನ್ನು ತಯಾರಿಸಿ ಕಾರ್ಯ ನಿರ್ವಾಹಕ ಇಂಜಿನಿಯರ್ ರವರ ಮೂಲಕ ಸದ್ರಿ ವರದಿ ಮತ್ತು ನಕಾಶೆಯನ್ನು ಲೋಕಾಯುಕ್ತ ಪೊಲೀಸರಿಗೆ ಸಲ್ಲಿಸಿರುತ್ತೇನೆ ಎಂದು ಹೇಳಿದ್ದಾರೆ. ಇದಕ್ಕೆ ನೀವೇನಾದರು ಹೇಳಲು ಬಯಸುತ್ತೀರಾ?

ಉತ್ತರಃ

ಪ್ರ.ನಂ.24 ಪ್ರಾಸಾ 13 ಚಂದ್ರಶೇಖರ ಶೆಣೈ ಇವರು ತನ್ನ ಸಾಕ್ಷಿಯಲ್ಲಿ, ನೀನು ತನ್ನ ಹೆಂಡತಿಯ ತಂಗಿಯ ಗಂಡನಾಗಿರುತ್ತಿ; ಸುಮಾರು ಎಂಟು ವರ್ಷದ ಹಿಂದೆ ತಾನು ನಿನ್ನ ಹೆಂಡತಿಯಾದ ಶ್ರೀಮತಿ ಶಕುಂತಲ ಕಾಮತ್ ರವರಿಗೆ ರೂ.1,65,000.00 ಹಣವನ್ನು ಚೆಕ್ ಮೂಲಕ ಕೊಟ್ಟಿದ್ದರು; ಸದ್ರಿ ಹಣವನ್ನು ಅವರು ವಾಪಾಸ್

ನೀಡಬೇಕು ಎನ್ನುವ ಶರತ್ತಿಗೆ ಒಳಪಟ್ಟು ಆ ಹಣವನ್ನು ನೀಡಿದ್ದಾರೆ; ನಂತರ ತಾನು ನಿನಗೆ ಒಂದು ಟಿ.ವಿ.ಯನ್ನು ಉಡುಗೊರೆಯಾಗಿ ಕೊಟ್ಟಿದ್ದರು ಹಾಗೂ ಲೋಕಾಯುಕ್ತ ಪೋಲೀಸರು ತನ್ನನ್ನು ವಿಚಾರಿಸಿ ತನ್ನ ಹೇಳಿಕೆ ಯನ್ನು ಪಡೆದಿರುತ್ತಾರೆ ಎಂದು ಹೇಳಿದ್ದಾರೆ. ಇದಕ್ಕೆ ನೀವೇನಾದರು ಹೇಳಲು ಬಯಸುತ್ತೀರಾ?

ಉತ್ತರಃ

ಪ್ರ.ನಂ.26 ಪ್ರಾಸಾ 14 ಮಣಿವಣ್ಣನ್.ಪಿ., ಸೆಕ್ರೆಟರಿ, ಕಾರ್ಮಿಕ ಇಲಾಖೆ ಇವರು ತಮ್ಮ ಸಾಕ್ಷ್ಯದಲ್ಲಿ, ತಾನು 2014 ರಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇಲಾಖೆ, ಬೆಂಗಳೂರುನಲ್ಲಿ ವ್ಯವಸ್ಥಾಪಕ ನಿರ್ದೇಶಕರು ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ; ಆ ವೇಳೆಗೆ ನೀನು ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಎರವಲು ಸೇವೆಯ ಮೇಲೆ ಕಿರಿಯ ಅಭಿಯಂತರು ಆಗಿ ಕರ್ತವ್ಯವನ್ನು ನಿರ್ವಹಿಸಿರುತಿ ಎಂದು ಹೇಳಿದ್ದಾರೆ. ಇದಕ್ಕೆ ನೀವೇನಾದರು ಹೇಳಲು ಬಯಸುತ್ತೀರಾ?

ಉತ್ತರಃ

ಪ್ರ.ನಂ.27 ಅದೇ ಸಾಕ್ಷಿಯು ಮುಂದುವರೆದು ದಿನಾಂಕ 09.04.2014 ರಂದು ಮಂಗಳೂರು ಲೋಕಾಯುಕ್ತ ಪೊಲೀಸ್ ನಿರೀಕ್ಷಕರಿಂದ ತಮ್ಮ ಕಛೇರಿಗೆ ನಿನ್ನನ್ನು ಅಭಿಯೋಗಕ್ಕೆ ಒಳಪಡಿಸುವ ಬಗ್ಗೆ ಮಂಜೂರಾತಿ ಆದೇಶವನ್ನು ನೀಡುವಂತೆ ಒಂದು ಪತ್ರ ಹಾಗೂ ಸಂಬಂಧಿತ ದಾಖಲೆಗಳನ್ನು ಸಲ್ಲಿಸಿದ್ದರು; ತಾನು ಸದ್ರಿ ಕಡತವನ್ನು ಪರಿಶೀಲಿಸಿದಾಗ ನೀನು ಬಲ್ಲ ಮೂಲ ಆದಾಯಕ್ಕಿಂತ ಅಸಮ ಪ್ರಮಾಣದ ಆಸ್ತಿಯನ್ನು ಗಳಿಸಿರುವ ಬಗ್ಗೆ ಮೇಲ್ನೋಟದ ಸಾಕ್ಷ್ಯ ಇರುವ ಬಗ್ಗೆ ಮನವರಿಕೆ ಆಗಿರುತ್ತದೆ; ಅದರಂತೆ ತಾನು ದಿನಾಂಕ 12.11.2014 ರಂದು ಒಂದು ಆದೇಶವನ್ನು ಮಾಡಿ ನಿನ್ನನ್ನು ಅಭಿಯೋಗಕ್ಕೆ ಒಳಪಡಿಸುವ ಬಗ್ಗೆ ಮಂಜೂರಾತಿಯನ್ನು ನೀಡಿರುತ್ತೇನೆ ಎಂದು ಹೇಳಿದ್ದಾರೆ.

ಉತ್ತರಃ

ಪ್ರ.ನಂ.28 ಪ್ರಾಸಾ 15 ದಿಲೀಪ್ ಕುಮಾರ್ ಕೆ.ಹೆಚ್. , ಪೋಲೀಸ್ ನಿರೀಕ್ಷಕರು ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 30.07.2012 ರಂದು ಮಧ್ಯಾಹ್ನ 2.00 ಗಂಟೆಗೆ ತನಗೆ ಲೋಕಾಯುಕ್ತ ಪೊಲೀಸ್ ಅಧೀಕ್ಷಕರು ಈ ಕೇಸಿನಲ್ಲಿ ನೀಡಿದ ಸೋರ್ಸ್ ಆಧಾರದ ಮೇಲೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ತನಿಖೆ ಮಾಡುವಂತೆ ನಿರ್ದೇಶನ ನೀಡಿದ್ದರು; ಆ ಆದೇಶವನ್ನು ಆಧರಿಸಿ ತಾನು ಸೋರ್ಸ್ ವರದಿಯನ್ನು ಸ್ವೀಕರಿಸಿದ ನಂತರ ಗುನ್ನಾ ನಂಬರ್ 12/2012 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿದ್ದಾರೆ; ಪ್ರಥಮ ವರ್ತಮಾನ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ

ನ್ಯಾಯಾಲಯಕ್ಕೆ ರವಾನಿಸಿದ್ದೇನೆ ಎಂದು ಹೇಳಿದ್ದಾರೆ. ಇದಕ್ಕೆ ನೀವೇನಾದರೂ ಹೇಳಲು ಬಯಸುತ್ತೀರಾ?

ಉತ್ತರಃ

ಪ್ರ.ನಂ.29 ಅದೇ ಸಾಕ್ಷಿಯು ಮುಂದುವರಿದು, ಅದೇ ದಿನ ಆರೋಪಿಯಾದ ನಿನ್ನ ಮನೆ ಮತ್ತು ಕಚೇರಿಯಲ್ಲಿ ಶೋಧನೆ ಮಾಡಲು ಶೋಧನಾ ವಾರೆಂಟ್‌ಗಳನ್ನು ನ್ಯಾಯಾಲಯದಿಂದ ಪಡೆದುಕೊಂಡಿದ್ದಾರೆ; ನಂತರ ತಾಲೂಕಾ ಪಂಚಾಯಿತಿ ಮತ್ತು ತಹಶೀಲ್ದಾರರ ಮಂಗಳೂರು ಇವರಿಗೆ ತಲಾ ಒಬ್ಬ ಸಿಬ್ಬಂದಿಗಳನ್ನು ಪಂಚರನ್ನಾಗಿ ಕಳುಹಿಸಿಕೊಡುವಂತೆ ಮನವಿ ಪತ್ರ ಸಲ್ಲಿಸಿದ್ದಾರೆ; ಅದೇ ದಿನ ಸಾಯಂಕಾಲ 5.00 ಗಂಟೆಗೆ ಚಾಸಾ 1 ಮತ್ತು 2 ಇವರನ್ನು ಆಯಾ ಇಲಾಖೆಯವರು ತನ್ನ ಕಚೇರಿಗೆ ನಿಯೋಜಿಸಿ ಕಳುಹಿಸಿಕೊಟ್ಟಿದ್ದರು ಎಂದು ಹೇಳಿದ್ದಾರೆ. ಇದಕ್ಕೆ ನೀವೇನಾದರೂ ಹೇಳಲು ಬಯಸುತ್ತೀರಾ?

ಉತ್ತರಃ

ಪ್ರ.ನಂ.30 ಅದೇ ಸಾಕ್ಷಿಯು ಮುಂದುವರಿದು, ಅವರಿಗೆ ಮರುದಿನ ಬೆಳಿಗ್ಗೆ 6.00 ಗಂಟೆಗೆ ಬರುವಂತೆ ತಿಳಿಸಿದ್ದರು; ದಿನಾಂಕ 31.07.2012 ರಂದು ತಾನು, ಚಾಸಾ 1 ಮತ್ತು 2 ಇವರು ಕಚೇರಿಗೆ ಹಾಜರಾದ ನಂತರ ತಾನು ಆರೋಪಿಯಾದ ನಿನ್ನ ಮನೆ ಶೋಧನೆ ಮಾಡಲು ಇದ್ದಂತಹ ವಾರೆಂಟನ್ನು ಪೊಲೀಸ್ ನಿರೀಕ್ಷಕರಾದಂತಹ ಚಾಸಾ 6 ಇವರಿಗೆ ಹಸ್ತಾಂತರಿಸಿದ್ದಾರೆ; ಚಾಸಾ 1 ಮತ್ತು 2 ಇವರನ್ನು ಸಹ ಚಾಸಾ 6 ಇವರ ಬಳಿಗೆ ಕಳುಹಿಸಿಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಇದಕ್ಕೆ ನೀವೇನಾದರೂ ಹೇಳಲು ಬಯಸುತ್ತೀರಾ?

ಉತ್ತರಃ

ಪ್ರ.ನಂ.31 ಅದೇ ಸಾಕ್ಷಿಯು ಮುಂದುವರಿದು, ದಿನಾಂಕ 31.07.2012 ರಂದು ತಾನು ಆರೋಪಿಯಾದ ನೀನು ಕಾರ್ಯ ನಿರ್ವಹಿಸುತ್ತಿದ್ದಂತಹ ಮಂಗಳೂರು ಮಹಾನಗರ ಪಾಲಿಕೆಯ ಕಟ್ಟಡದಲ್ಲಿ ಇದ್ದಂತಹ ನಿನ್ನ ಕಚೇರಿಗೆ ಹೋಗಿದ್ದರು; ಅಲ್ಲಿ ಚಾಸಾ 3 ಮತ್ತು 4 ಇವರನ್ನು ಆ ಕಚೇರಿಗೆ ಕರೆಯಿಸಿದರು; ಅವರು ಬಂದ ನಂತರ ಬೆಳಿಗ್ಗೆ 11.00 ಗಂಟೆಗೆ ನಿನ್ನ ಕಚೇರಿಯನ್ನು ಶೋಧನೆ ಮಾಡಿದ್ದಾರೆ; ಆ ಸಮಯದಲ್ಲಿ ಆ ಕಚೇರಿಯ ಅಧೀಕ್ಷಕರಾದ ಮದನ್ ಮೋಹನ್ ಹಾಜರಿದ್ದರು; ಶೋಧನಾ ಕಾಲಕ್ಕೆ ಆ ಕಚೇರಿಯಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದಂತಹ ಎರಡು ದಾಖಲೆಗಳು ದೊರೆತಿವೆ; ಆ ಎರಡು ದಾಖಲೆಗಳನ್ನು ತಾನು ವಶಕ್ಕೆ ಪಡೆದು, ಈ ಕುರಿತು ಆ ಕಚೇರಿಯಲ್ಲಿ ಮಹಜರನ್ನು ಮಾಡಿರುತ್ತಾರೆ ಎಂದು ಹೇಳಿದ್ದಾರೆ. ಇದಕ್ಕೆ ನೀವೇನಾದರೂ ಹೇಳಲು ಬಯಸುತ್ತೀರಾ?

ಉತ್ತರಃ ಅದೇ ಸಾಕ್ಷಿಯು ಮುಂದುವರಿದು, ಅದೇ ದಿನ ತಾನು, ಚಾಸಾ 3 ಮತ್ತು 4 ಸೇರಿಕೊಂಡು ಮಂಗಳೂರಿನ ಮಲ್ಲಿಕಟ್ಟೆ ಶಾಖೆಯ ಕೆನರಾ ಬ್ಯಾಂಕಿಗೆ ಹೋಗಿದ್ದರು;

ಪ್ರ.ನಂ.32 ಅಲ್ಲಿ ಚಿನ್ನದ ಕೆಲಸ ಮಾಡುತ್ತಿದ್ದಂತಹ ಹರೀಶ್ ಎಂಬಾತನನ್ನು ಕರೆಯಿಸಿದ್ದರು; ಆ ಬ್ಯಾಂಕಿನಲ್ಲಿ ಆರೋಪಿಯಾದ ನಿನ್ನ ಹೆಸರಿನಲ್ಲಿ ಲಾಕರ್ ಇತ್ತು; ಆ ಬ್ಯಾಂಕಿಗೆ ಆರೋಪಿಯಾದ ನಿನ್ನನ್ನು ಕರೆದುಕೊಂಡು ಹೋಗಿದ್ದರು; ನಿನ್ನ ಹೆಸರಿನಲ್ಲಿದ್ದ ಬ್ಯಾಂಕಿನ ಲಾಕರನ್ನು ಮ್ಯಾನೇಜರ್ ಮೂಲಕ ತೆರೆಸಿ ನೋಡಿದ್ದಾರೆ; ಆ ಲಾಕರದಲ್ಲಿ 223.13 ಗ್ರಾಂ ತೂಕದ ಚಿನ್ನದ ಒಡವೆಗಳು ಮತ್ತು 450.28 ಗ್ರಾಂ ತೂಕದ ಬೆಳ್ಳಿಯ ವಸ್ತುಗಳು ದೊರೆತಿದೆ; ಅವುಗಳ ಮೌಲ್ಯವನ್ನು ಹರೀಶ್ ಈತನಿಂದ ತೂಕ ಮಾಡಿಸಿ ಕೊಂಡಿದ್ದಾರೆ; ಆಭರಣಗಳನ್ನು ಅದೇ ಬ್ಯಾಂಕಿನ ಲಾಕರದಲ್ಲಿ ಇಟ್ಟು ಆರೋಪಿಯಾದ ನಿನಗೆ ಹಸ್ತಾಂತರಿಸಲಾಗಿದೆ; ತಾನು ಆ ಬ್ಯಾಂಕಿನ ಮ್ಯಾನೇಜರ್ ಈತನ ಹೇಳಿಕೆಯನ್ನು ಪಡೆದಿದ್ದಾರೆ ಎಂದು ಹೇಳಿದ್ದಾರೆ. ಇದಕ್ಕೆ ನೀವೇನಾದರೂ ಹೇಳಲು ಬಯಸುತ್ತೀರಾ?

ಉತ್ತರಃ

ಪ್ರ.ನಂ.33 ಅದೇ ಸಾಕ್ಷಿಯು ಮುಂದುವರಿದು, ದಿನಾಂಕ 01.08.2012 ರಂದು ಉದಯ ಎಮ್ ನಾಯಕ ಇವರು ತಾನು ಅವರಿಗೆ ನೀಡಿದ ಶೋಧನಾ ವಾರೆಂಟನ್ನು, ಅವರು ಮಾಡಿದ ಮಹಜರನ್ನು, ಮಹಜರದಲ್ಲಿ ಕಾಣಿಸಿದಂತಹ ದಾಖಲಾತಿಗಳನ್ನು ತನಗೆ ನೀಡಿದ್ದಾರೆ ಅವುಗಳನ್ನು ಕಡತದಲ್ಲಿ ಅಳವಡಿಸಿಕೊಂಡಿದ್ದಾರೆ; ಅದೇ ದಿನ ಚಾಸಾ 1 ರಿಂದ 4 ಇವರ ಹೇಳಿಕೆಗಳನ್ನು ಪಡೆದಿದ್ದಾರೆ; ತಾನು ಮೇಲೆ ಹೇಳಿದ ಮಹಜರ್, ಶೋಧನಾ ವಾರೆಂಟುಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಹೇಳಿದ್ದಾರೆ. ಇದಕ್ಕೆ ನೀವೇನಾದರೂ ಹೇಳಲು ಬಯಸುತ್ತೀರಾ?

ಉತ್ತರಃ

ಪ್ರ.ನಂ.34 ಅದೇ ಸಾಕ್ಷಿಯು ಮುಂದುವರಿದು, ದಿನಾಂಕ 02.08.2012 ರಂದು ಚಾಸಾ 7 ರಿಂದ ಚಾಸಾ 13, ಚಾಸಾ 5 ಇವರ ಹೇಳಿಕೆ ಪಡೆದಿದ್ದಾರೆ; ತನಿಖಾ ಕಾಲದಲ್ಲಿ ಎಲ್.ಐ.ಸಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ದಿಂದ ಪತ್ರ ಮತ್ತು ತಃಖ್ತೆಯನ್ನು ಪಡೆದುಕೊಂಡಿದ್ದಾರೆ; ತನಿಖಾ ಕಾಲದಲ್ಲಿ ಕರ್ನಾಟಕ ಲೋಕಾಯುಕ್ತ ಬೆಂಗಳೂರು ಅಂಕಿ ಸಂಖ್ಯೆ ವಿಭಾಗದಿಂದ ಜಿ ತುಳಸಿರಾಮ್ ಇವರು ನೀಡಿದ ವರದಿಯನ್ನು ಮತ್ತು ಅದರ ಅನುಸೂಚಿಗಳನ್ನು ಪಡೆದುಕೊಂಡಿದ್ದಾರೆ; ತನಿಖಾ ಕಾಲದಲ್ಲಿ ಆರೋಪಿಯಾದ ನೀನು ಕೆನರಾ ಬ್ಯಾಂಕಿನಲ್ಲಿ ಹೊಂದಿದ ಖಾತೆಯ ತಃಖ್ತೆಯನ್ನು ಪಡೆದುಕೊಂಡಿದ್ದಾರೆ ಎಂದು ಹೇಳಿದ್ದಾರೆ. ಇದಕ್ಕೆ ನೀವೇನಾದರೂ ಹೇಳಲು ಬಯಸುತ್ತೀರಾ?

ಉತ್ತರಃ

ಪ್ರ.ನಂ.35 10. ಆರೋಪಿಯಾದ ನೀನು ಸೇವೆ ಸಲ್ಲಿಸುತ್ತಿದ್ದಂತಹ ಇಲಾಖೆಯಿಂದ ಆ ಸಲ್ಲಿಸಿದಂತಹ ಒಟ್ಟು 11 ಆಸ್ತಿ ಮತ್ತು ದಾಯಿತ್ವದ ಪಟ್ಟಿಗಳನ್ನು ಪಡೆದುಕೊಂಡಿದ್ದಾರೆ; ಉದಯ್ ಎಮ್ ನಾಯಕ್ ಇವರು ಶೋಧನಾ ವಾರೆಂಟಿನೊಂದಿಗೆ ಒಟ್ಟು 50 ದಾಖಲೆಗಳನ್ನು ಗುರುತಿಸಿದ್ದಾರೆ ಎಂದು ಹೇಳಿದ್ದಾರೆ.

ಇದಕ್ಕೆ ನೀವೇನಾದರೂ ಹೇಳಲು ಬಯಸುತ್ತೀರಾ?

ಪ್ರ.ನಂ.36 ಅದೇ ಸಾಕ್ಷಿಯು ಮುಂದುವರಿದು, ಆರೋಪಿಯಾದ ನೀನು ತನಿಖಾ ಕಾಲದಲ್ಲಿ ತನಗೆ ಸ್ಟೇಟ್‌ಮೆಂಟ್ ನಂಬರ್ 1 ರಿಂದ 23 ರನ್ನು ಒಟ್ಟು 5 ವ್ಯಾಲ್ಯೂಮ್‌ಗಳಲ್ಲಿ ಸಲ್ಲಿಸಿರುತ್ತಿ; ಆರೋಪಿಯಾದ ನೀನು ಶೆಡ್ಯೂಲ್ 1 ರಿಂದ 23 ರಲ್ಲಿ ತನಗೆ ಒಕ್ಕಲುತನದಿಂದ ಮತ್ತು ಉಡುಗೊರೆಯ ರೂಪದಲ್ಲಿ ರೂ.26,75,000/ ಬಂದಿದೆ ಎಂದು ತೋರಿಸಿರುತ್ತಿ; ನಿನಗೆ ಕೃಷಿಯಿಂದ ರೂ.1,46,000/ ಆದಾಯ ಬಂದಿರುತ್ತದೆ; ಅದನ್ನು ಗಣನೆಗೆ ತೆಗೆದುಕೊಂಡಿದ್ದಾರೆ ಎಂದು ಹೇಳಿದ್ದಾರೆ. ಇದಕ್ಕೆ ನೀವೇನಾದರೂ ಹೇಳಲು ಬಯಸುತ್ತೀರಾ?

ಉತ್ತರಃ

ಪ್ರ.ನಂ.37 ಅದೇ ಸಾಕ್ಷಿಯು ಮುಂದುವರಿದು, ಆರೋಪಿಯಾದ ನೀನು ನಿನ್ನ ಹೆಂಡತಿಗೆ ಎನ್ ಎಸ್ ಸಿ ಮತ್ತು ಡಿವಿಡೆಂಟ್ ಮೂಲಕ ರೂ.1,79,959/ ಆದಾಯ ಬಂದಿದೆ ಎಂದು ತೋರಿಸಿದ್ದಿ; ಅದರಲ್ಲಿ ರೂ.6,841/ ಮೇಲೆ ಹೇಳಿದ ಮೂಲಗಳಿಂದ ಬಂದದ್ದು ಕಂಡು ಬಂದಿದೆ; ಕಾರಣ ಆರೋಪಿಯಾದ ನೀನು ರೂ.6,841/ ಆದಾಯ ಪಡೆದಿದ್ದಿ ಎಂದು ಪರಿಗಣಿಸಿದ್ದಾರೆ ಎಂದು ಹೇಳಿದ್ದಾರೆ. ಇದಕ್ಕೆ ನೀವೇನಾದರೂ ಹೇಳಲು ಬಯಸುತ್ತೀರಾ?

ಉತ್ತರಃ

ಪ್ರ.ನಂ.38 ಅದೇ ಸಾಕ್ಷಿಯು ಮುಂದುವರಿದು, ತನಿಖಾ ಕಾಲದಲ್ಲಿ ಆರೋಪಿಯಾದ ನಿನಗೆ ಒಟ್ಟು ರೂ.54,44,846/ ಆದಾಯ ಬಂದಿದೆ ಎಂದು ಕಂಡು ಬಂದಿದೆ; ನೀನು ನಿನ್ನ ಸೇವಾ ಅವಧಿಯಲ್ಲಿ ರೂ.59,96,049/ ಹಣವನ್ನು ವೆಚ್ಚ ಮಾಡಿದ್ದಿ ಎಂದು ಕಂಡು ಬಂದಿದೆ; ನೀನು ರೂ.58,62,465/ ಬೆಲೆಯುಳ್ಳ ಆಸ್ತಿಗಳನ್ನು ಹೊಂದಿರುತ್ತಿ; ಕಾರಣ ನೀನು ನಿನ್ನ ಬಲ್ಲ ಆದಾಯದ ಮೂಲಗಳಿಗಿಂತ ಖರ್ಚು ಮತ್ತು ಆಸ್ತಿಗಳನ್ನು ಹೆಚ್ಚು ಹೊಂದಿದ್ದಿ ಎಂದು ತನಿಖೆಯಲ್ಲಿ ಕಂಡು ಬಂದಿದೆ; ಅದರ ಪ್ರಮಾಣ ಪ್ರತಿಶತ 112.28 ಎಂದು ಕಂಡು ಬಂದಿದೆ ಎಂದು ಹೇಳಿದ್ದಾರೆ. ಇದಕ್ಕೆ ನೀವೇನಾದರೂ ಹೇಳಲು ಬಯಸುತ್ತೀರಾ?

ಉತ್ತರಃ

ಪ್ರ.ನಂ.39 ಅದೇ ಸಾಕ್ಷಿಯು ಮುಂದುವರಿದು, ಕಾರಣ ತಾನು ಆರೋಪಿಯಾದ ನಿನ್ನ ವಿರುದ್ಧ ದೋಷಾರೋಪಣಾ ಪತ್ರವನ್ನು ತಯಾರಿಸಿ ತನ್ನ ಮೇಲಾಧಿಕಾರಿಗಳಿಗೆ ಆರೋಪಿಯನ್ನು ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿಯನ್ನು ದೊರಕಿಸಿ ಕೊಡುವಂತೆ ಎಲ್ಲಾ ದಾಖಲೆಗಳನ್ನು ಕಳುಹಿಸಿಕೊಟ್ಟಿದ್ದರು; ತನ್ನ ಮೇಲಾಧಿಕಾರಿಗಳು ನಿನ್ನನ್ನು ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿಯನ್ನು ಪಡೆದು ಕಡತವನ್ನು ಹಿಂದಿರುಗಿಸಿದ್ದರು; ನಂತರ ತಾನು ಆರೋಪಿಯಾದ ನಿನ್ನ ವಿರುದ್ಧ

ದೋಷಾರೋಪಣಾ ಪತ್ರವನ್ನು ಸಲ್ಲಿಸಿದ್ದಾರೆ ಎಂದು ಹೇಳಿದ್ದಾರೆ. ಇದಕ್ಕೆ ನೀವೇನಾದರೂ ಹೇಳಲು ಬಯಸುತ್ತೀರಾ ?

ಉತ್ತರಃ

ಪ್ರ.ನಂ.40 ಅದೇ ಸಾಕ್ಷಿಯು ಮುಂದುವರಿದು, ತನಿಖಾ ಕಾಲದಲ್ಲಿ ಆರೋಪಿಯಾದ ನಿನ್ನ ಸೇವಾ ವಿವರಗಳನ್ನು ಪಡೆದುಕೊಂಡಿದ್ದಾರೆ; ಅಂಚೆ ಇಲಾಖೆಯಿಂದ ಆರೋಪಿಯಾದ ನಿನ್ನ ಹೆಂಡತಿಗೆ ಕಮಿಷನ್ ಮೂಲಕ ಎಷ್ಟು ಹಣ ನೀಡಲಾಗಿದೆ ಎಂಬ ಕುರಿತು ಪತ್ರವನ್ನು ಪಡೆದಿದ್ದಾರೆ; ನೀನು ಸರ್ಕಾರಿ ಸೇವೆಗೆ ಸೇರುವ ಪೂರ್ವದಲ್ಲಿ ಇಂಜಿನಿಯರ್ ಆಗಿ ಕೆಲಸ ಮಾಡಿದ್ದ ಕುರಿತು ಮತ್ತು ಅವರಿಗೆ ಆ ಕೆಲಸದಿಂದ ಬಂದ ಆದಾಯ ಕುರಿತು ಸದಾನಂದ ಅಂಚನ್ ಇವರಿಂದ ದಾಖಲೆಗಳನ್ನು ಪಡೆದುಕೊಂಡಿದ್ದಾರೆ ಎಂದು ಹೇಳಿದ್ದಾರೆ. ಇದಕ್ಕೆ ನೀವೇನಾದರೂ ಹೇಳಲು ಬಯಸುತ್ತೀರಾ ?

ಉತ್ತರಃ

ಪ್ರ.ನಂ.41 ನಿಮ್ಮ ಪರ ಯಾರಾದರೂ ಸಾಕ್ಷಿ ವಿಚಾರಣೆ ಮಾಡುವಿರಾ ?

ಉತ್ತರಃ

ಪ್ರ.ನಂ.42 ನಿಮ್ಮ ಪರವಾಗಿ ಯಾವುದಾದರೂ ದಾಖಲೆಗಳನ್ನು ಹಾಜರುಪಡಿಸಲು ಇಚ್ಛಿಸುವಿರಾ ?

ಉತ್ತರಃ

ಪ್ರ.ನಂ.43 ನಿಮಗೆ ಇನ್ನೂ ಏನಾದರು ಹೇಳುವುದು ಇದೆಯೇ ?

ಉತ್ತರಃ

(ಮೇಲ್ಕಂಡ ಹೇಳಿಕೆಗಳನ್ನು ನಾನೇ ನನ್ನ ಖುದ್ದು ಹಾಜರಾತಿಯಲ್ಲಿ ಆರೋಪಿಗಳಿಗೆ ತಿಳಿದ/ತಿಳಿಸಿದ ಭಾಷೆಯಲ್ಲಿ ಓದಿ ಹೇಳಿ ಅವರು ಕೊಟ್ಟ ಹೇಳಿಕೆಯನ್ನು ನಾನೇ ಖುದ್ದು ಹಾಜರಾತಿಯಲ್ಲಿ ಆರೋಪಿಗಳಿಗೆ ತಿಳಿದ/ತಿಳಿಸಿದ ಭಾಷೆಯಲ್ಲಿ ಓದಿ ಹೇಳಿ ಅವರು ಕೊಟ್ಟ ಹೇಳಿಕೆಯನ್ನು ನಾನೇ ಬರೆದುಕೊಂಡಿರುವುದಾಗಿ ಈ ಮೂಲಕ ದೃಢಿಕರಿಸುತ್ತೇನೆ.)

ದಿನಾಂಕಃ .2021

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು